ದಿನಾಂಕ 10-04-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ಶ್ರೀ.ಎಂ.ಬಿ.ಸಿ ವಕೀಲರಿಂದಃ-

ನಾನು 8 ನೇ ತರಗತಿಯವರೆಗೆ ಕಲಿತಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ದಿನಾಂಕ 06.10.2017 ರಲ್ಲಿ ಆರ ಎಸ್ ಎ 376/2015 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆದೇಶವಾಗಿದೆ ಎಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆದ ಆದೇಶವನ್ನು ಮತ್ತೆ ನಾವು ಪ್ರಶ್ನೆ ಮಾಡಿಲ್ಲ. 06.102017 ರಲ್ಲಿ 7/1 ಭಾಗದಂತೆ ಆದೇಶವಾಗಿರುವಂತೆ ಎಫ್ ಡಿ ಪಿ ಯಲ್ಲಿ ಆದೇಶ ಮಾಡುವಂತೆ ಅದೇಶದ ಅಗಿತ್ತು ಎಂದರೆ ಸರಿ. ಅದರಲ್ಲಿ ನನ್ನ ತಂದೆಗೆ 1 ಭಾಗ ಆದೇಶ ಅಗಿದೆ ಎಂದರೆ ಸರಿ. ನನ್ನ ತಾತ ಮರಿಮಲ್ಲಯ್ಯರವರಿಗೆ 3 ಜನ ಪತ್ನಿಯರು ಎಂದರೆ ಸರಿ. ಅವರೆಂದರೆ ನಿಂಗಮ್ಮ, ತಿಮ್ಮಮ್ಮ ಮತ್ತು ಸಿದ್ದಮ್ಮ ಎಂದರೆ ಸರಿ. ನಮ್ಮ ಅಜ್ಜ ನಿಂಗಮ್ಮರವರಿಗೆ ನನ್ನ ತಂದೆ ಮಲ್ಲಯ್ಯ ಅಲಿಯಾಸ್ ಮಾದಯ್ಯ ಒಬ್ಬರೇ ಮಗ ಎಂದರೆ ಸರಿ. ತಿಮ್ಮಮ್ಮರವರಿಗೆ 2 ಗಂಡು ಮಕ್ಕಳು ಎಂದರೆ ಸರಿ. 3ನೇ ಪತ್ನಿ ಸಿದ್ದಮ್ಮರವರಿಗೆ 3 ಗಂಡು ಮತ್ತು 1 ಹೆಣ್ಣು ಮಗಳು ಎಂದರೆ ಸರಿ. 3ನೇ ಹೆಂಡತಿ ಸಿದ್ದಮ್ಮರವರ ವಾರಸುದಾರರೇ ಮರಿಸ್ವಾಮಯ್ಯ, ಹನುಮಯ್ಯ ಮತ್ತು ಶಿವಪ್ಪ ಮತ್ತು ಸಣ್ಣಮ್ಮ ಎಂದರೆ ಸರಿ. ಅವರೆಲ್ಲರಿಗೂ 4 ಭಾಗ ಬಂದಿದೆ ಎಂದರೆ ಸರಿ. ಆರ ಎಸ್ ಎ 376/2015 ಮಾನ್ಯ ಉಚ್ಪ. ನ್ಯಾಯಲಾಯದಿಂದ ವಾಪಸ್ಸು ಬಂದ ಕಾಲಕ್ಕೆ ನನ್ನ ತಂದೆ ಜೀವಂತ ಇದ್ದರು ಎಂದರೆ ಸರಿ. ಅರ್ಜಿ ಸಂಖ್ಯೆ 1/2024 ಅರ್ಜಿಯನ್ನು ಓದಿಸಿ ತಿಳಿದಯಿಕೊಂಡಿದ್ದೇನೆ. ಸದರಿ ಅರ್ಜಿಗೆ ನಾವು ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿ. ಅದಕ್ಕೆ ಎದುರುದಾರರು ಕೌಂಟರ ಅಫಿಡಫಿಟ್ ಹಾಕಿದಾಪ್ವರೆ ಎಂದರೆ ಗೊತ್ತಿಲ್ಲ. ಮರಿಸ್ವಾಮಯ್ಯನವರ ವಾರಸುದಾರರು ನೀಡಿರುವ ಸಾಕ್ಷ್ಯವನ್ನು ಓದಿಸಿ ತಿಳಿದುಕೊಂಡಿದ್ದೇನೆ. ಮುಖ್ಯ ವಿಚಾರಣೆಯಲ್ಲಿನ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳನ್ನು ನಾನು ನಮ್ಮ ತಕರಾರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಆನಂದ್ ಕಮಾರ ರವರ ವಿಚಾರಣೆ ಆದ ನಂತರ ನಾನು ನನ್ನ

ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಉತ್ತಮ ಪಡಿಸಿಕೊಂಡ ಹೇಳಿಕೆಗಳನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ತಕರಾರಿಗೂ ಹಾಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೂ ಹೋಲಿಕೆ ಇಲ್ಲ ಎಂದರೆ ಸರಿಯಲ್ಲ. ನೀವು ತಕರಾರಿನಲ್ಲಿ ಹೇಳಿರುವ ವಿಚಾರಕ್ಕೆ ಬದ್ದರಾಗುತ್ತೀರಾ ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಕ್ಕೆ ಬದ್ದರಾಗುತ್ತೀರಾ ಎಂದರೆ ಸಾಕ್ಷಿಯು ಸಾಕ್ಷ್ಯಕ್ಕೆ ಎಂದು ನುಡಿಯುತ್ತಾರೆ. ಮರಿಸ್ವಾ ಮಯ್ಯನವರ ವಾರಸುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸೌಭಾಗ್ಯಮ್ಮ ಮೊದಲನೇ ಹೆಂಡತಿ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಇದು ಮರಿಸ್ವಾ ಮಯ್ಯನವರ ಮರಣ ಪ್ರಮಾಣ ಪತ್ರ ಎಂದು ಸೂಚಿಸಿದ್ದು, ಸದರಿ ಮರಣ ಪ್ರಮಾಣ ಪತ್ರವನ್ನು ನಿಆರ -2 ಎಂದು ಗುರುತಿಸಲಾಯಿತು. ನಿಆರ್ 2 ರಲ್ಲಿ ಮರಿಸ್ವಾಮಯ್ಯನವರ ಪತ್ನಿ ಹೆಸರು ಜಯಮ್ಮ ಎಂದು ಇದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತಾರೆ. ನಿಡಿ-55 ರಲ್ಲಿ ಮೊದಲನೇ ಪತ್ನಿ ಸೌಭಾಗ್ಯಮ್ಮ ರವರ ಹೆಸರು ಇದೆಯಾ ಎಂದರೆ ಸಾಕ್ಷಿಯು ನಿಡಿ-55 ನ್ನು ಓದಿ ಇಲ್ಲ ಎಂದು ನುಡಿಯುತ್ತಾರೆ. ಮರಿಸ್ವಾಮಯ್ಯನವರ ವಾರಸುದಾರರೆಲ್ಲ ತಿಮ್ಮಸಂದ್ರದಲ್ಲಿ ವಾಸ ಇದ್ದಾರೆ ಎಂದರೆ ಸರಿ. ನಾನು ತಿಮ್ಮತಂದ್ರ ಗೇಟ್ ಕದಲೀಗೌಡನ ದೊಡ್ಡಿಯಲ್ಲಿ ವಾಸವಾಗಿದ್ದೇನೆ. ಸಾಮಾನ್ಯವಾಗಿ ಒಂದು ಊರಿನಲ್ಲಿ ಒಂದು ಹೆಸರನ್ನು 3-4 ಜನರು ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ನಿಡಿ-55 ರಲ್ಲಿ ನಮೂದಾಾಗಿರುವ ಮರಿಸ್ವಾಮಯ್ಯ ಶಿವನೇಗೌಡನದೊಡ್ಡಿ ವಾಸಿ ಅಲ್ಲ ತಿಮಸಂದ್ರದವರು ಎಂದರೆ ಸಾಕ್ಷಿಯು ನಿಡಿ-55 ಮರಿಸ್ವಾಮಯ್ಯನವರ ಮಗಳ ಟಿಸಿ ಎಂದು ನುಡಿಯುತ್ತಾರೆ. ನಾನು ಹೇಳುವ ಮರಿಸ್ವಾಮಯ್ಯ ಮತ್ತು ಮೃತ ಮರಿಸ್ವಾಮಯ್ಯ ಬೇರೆ ಬೇರೆ ಎಂದರೆ ಸರಿಯಲ್ಲ. ನಿಡಿ-55 ನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಹಾಗೂ ಮರಿಸ್ವಾ ಮಯ್ಯ ಎಂಬ ಹೆಸರನ್ನು

ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ಮರಿಸ್ವಾಮಯ್ಯನವರ ಜೊತೆ ಸಂಸಾರ ಮಾಡಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ವಸಂತಮ್ಮನಿಗೂ ಮೃತ ಮರಿಸ್ವಾಮಯ್ಯನಿಗೂ ಯಾವುದೇ ರಕ್ತ ಸಂಬಂಧ ಇಲ್ಲ, ಸೌಭಾಗ್ಯಮ್ಮರವರಿಗೂ ಸಹಾ ಯಾವುದೇ ರಕ್ತ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮರಿಸ್ವಾಮಯ್ಯನವರಿಗೆ ಜಯಮ್ಮ ಒಬ್ಬಗೆ ಕಾನೂನು ಬದ್ದವಾದ ಪತ್ನಿ ಎಂದರೆ ಸರಿಯಲ್ಲ. ಸೌಭಾಗ್ಯಮ್ಮರವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸೌಭಾಗ್ಯಮ್ಮನವರು 2023 ರಲ್ಲಿ ತೀರಿಕೊಂಡರು. ಇದುವರೆಗೂ ಅವರ ಮರಣ ಪ್ರಮಾಣ ಪತ್ರ ತೆಗೆದುಕೊಳ್ಳಲು ಪ್ರಯತ್ನ ಮಾಡಿಲ್ಲ. ವಸಂತಮ್ಮ ಮೃತ ಮರಿಸ್ವಾಮಯ್ಯನವರ ಮಗಳಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಂಸತಮ್ಮನವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದರೆ ಸತ್ಯಾಂಶ ಹೊರ ಬರುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ನಾವಿಬ್ಬರು ಹೆಣ್ಣು ಮಕ್ಕಳು ಗಂಡು ಮಕ್ಕಳಿಲ್ಲ. ನನ್ನ ಅಕ್ಕ ಯಾವತ್ತು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳಿಲ್ಲ ಎಂದರೆ ಸರಿ. ನನ್ನ ಅಕ್ಕ ನಾಯಲಾಯಕ್ಕೆ ಬಂದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನಾನೊಬ್ಬಳೇ ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ. 7ನೇ 1 ಭಾಗ ಆದ ಮೇಲೆ ಹತಾಶರಾಗಿ ದಾಖಲೆ ಸೃಷ್ಟಿಸಿ ತಂದಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಉಳಿದವರ್ಯಾರು ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ಮೂಲ ದಾವೆಯಲ್ಲಿ ನಮ್ಮ ಮಾವ ಪವರ್ ಆಫ್ ಅಟಾರ್ನಿ ಪಡೆದುಕೊಂಡು ಸಾಕ್ಷ್ಯ ಕೊಟ್ಟಿದ್ದರು ಎಂದರೆ ಸರಿ. ಅವರು ಏನು ಸಾಕ್ಷ್ಯ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರು ನೀಡಿದ ಸಾಕ್ಷ್ಯದಲ್ಲಿ ಎಲ್ಲಾ ಆಸ್ತಿ ಮೇಲ್ಮನವಿದಾರರಿಗೆ ಹೋಗಬೇಕೆಂದು ದುರುದ್ದೇಶದಿಂದ ಹೇಳಿದ್ದರೂ ಆದ್ದರಿಂದ ನಾವು ಆಸ್ತಿ ವಿಂಗಡಣೆ ಆಗಿರುವುದರಿಂದ ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ನನ್ನ ಪತಿಯ ಚಿತಾವಣಿ ಮೇರೆಗೆ ಬಂದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯನ್ನು ಯಾರು ಅನುಭವಿಸಬಾರದೆಂಬ ದುರುದ್ದೇಶದಿಂದ ಬಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಫ್ ಡಿ ಪಿ ಯಲ್ಲಿ ಕಮೀಷನರ ವರದಿ ಬಂದ ನಂತರ ಬೇರೆ ಬೇರೆ ಅರ್ಜಿಗಳನ್ನು ಸಲ್ಲಿಸಿ ಎದುರುದಾರರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ನಮ್ಮ ಕೈ ತಪ್ಪುತದೆಂದು ಇತರೆ ವಾರಸುದಾರರಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೌಭಾಗ್ಯಮ್ಮನವರ ಮರಣ ಪ್ರಮಾಣ ಪತ್ರವನ್ನು ಅವಕಾಶ ಕೊಟ್ಟರೆ ಹಾಜರುಪಡಿಸಬಲ್ಲೆ. ನಾನು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಕೇಸನ್ನು ಇಲ್ಲಿಯ ವರೆಗೂ ಎಳೆದು ತಂದಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ-55 ದಾಖಲೆ ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ, ಅರ್ಜಿ ಸಂಖೆ 1/2024 ಪುರಸ್ಕೃ ತ ಗೊಂಡರೆ ನನಗೆ ತೊಂದರೆ ಆಗುತ್ತದೆಂದು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನಾನು ಸಲ್ಲಿಸಿದ ತಕರಾರಿಗೆ ಸಲ್ಲಿಸಿರುವ ಕೌಂಟರ ಅಫಿಡವಿಟ್ 9ಚಾರ ಗೊತ್ತಿದ್ದು ಸಹಾ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.